## ಸಿತಾರ್ ದಕ್ಷಿಣಕ್ಕೆ ಬಂದ ಕಥೆ

ತಂತಿವಾದ್ಯ ಸಿತಾರ್ ಅನ್ನು ವಿಶ್ವಮಟ್ಟದಲ್ಲಿ ಜನಪ್ರಿಯಗೊಳಿಸಿದವರು ನಾದಯೋಗಿ ಪಂ. ರವಿಶಂಕರ್. ಈ ವಾದ್ಯದೊಂದಿಗೆ ಅನ್ವರ್ಥನಾಮವಾಗಿ ಮೆರೆದ ರವಿಶಂಕರ್ ತಮ್ಮ ಪ್ರಯೋಗಶೀಲ ಮನಸ್ಸು ಹಾಗೂ ಗುಣದಿಂದ ವಿಶ್ವವೇದಿಕೆಗಳಲ್ಲಿ ಬಹುಬೇಗ ಜನಪ್ರಿಯತೆ ಗಳಿಸಿದ್ದವರು. ಬಿಳಿಗಡ್ಡದ ಈ ಸ್ವರಸಂತ ಒಂದು ರಾಗದಲ್ಲಿ ಹಲವು ರಾಗಗಳ ಎಳೆಯನ್ನು ಸೃಷ್ಟಿಸಿ ಅದ್ಭುತ 'ರಾಗರಸ' ಸೃಷ್ಟಿಸುತ್ತಿದ್ದ ರೀತಿ ಅನನ್ಯ. ಇವರ ನೀಳ ಬೆರಳುಗಳು ಸಿತಾರ್ ತಂತಿಯ ಮೇಲೆ ಸರಸರನೆ ಓಡಾಡಿದಾಗ ಅಲ್ಲಿ ಮಾಂತ್ರಿಕ ಜಗತ್ತೇ ಸೃಷ್ಟಿಯಾಗುತ್ತಿತ್ತು.

ಅದು 1948–49ನೇ ಇಸವಿ. ಆಗ ಬೆಂಗಳೂರಿನಲ್ಲಿ ಅಷ್ಟೇ ಅಲ್ಲ, ಇಡೀ ದಕ್ಷಿಣ ಭಾರತದಲ್ಲಿ ಸಿತಾರ್ ನುಡಿಸುವವರು, ಕಲಿಸುವವರು ವಿರಳ ಸಂಖ್ಯೆಯಲ್ಲಿದ್ದರು. ಆ ಸಮಯದಲ್ಲಿ ಬೆಂಗಳೂರಿನ ಜಯನಗರದಲ್ಲಿ ರಾಮರಾವ್ ಎಂಬ ಸಂಗೀತ ವಿದ್ಯಾರ್ಥಿಯ ಮನೆಗೆ ಬಂದ ಪಂಡಿತ್‌ಜಿ, ಅವರಿಗೆ ಸಿತಾರ್ ನುಡಿಸಾಣಿಕೆ ಕಲಿಸಿದರು. ಅಲ್ಲಿಂದ ಸಿತಾರ್ ಅನ್ನು ದಕ್ಷಿಣ ಭಾರತದಲ್ಲೂ ಜನಪ್ರಿಯಗೊಳಿಸಿದ್ದು ದಾಖಲಾರ್ಹವೂ ಹೌದು.

ರವಿಶಂಕರ್ ಅವರ ಮಗಳು ಅನೌಷ್ಕಾ ಶಂಕರ್ ಲಂಡನ್‌ನಲ್ಲಿ ನೆಲೆಸಿದ್ದು ತಂದೆ ಹಾಗೂ ಗುರುವಿನ ಜನ್ಮಶತಮಾನೋತ್ಸವವನ್ನು ಆನ್‌ಲೈನ್ ಮೂಲಕ ಸಂಗೀತ ಕಛೇರಿ, ವಿಡಿಯೊ ಆಲ್ಬಂ ಬಿಡುಗಡೆ... ಹೀಗೆ ಹಲವು ಸಂಗೀತ ಯೋಜನೆಗಳ ಮೂಲಕ ಸಾಕಾರಗೊಳಿಸುತ್ತಿದ್ದಾರೆ.

ಬಿಡುಗಡೆ ಮಾಡಿದ್ದೇನೆ.

ಕೊರೊನಾ ಆರಂಭಕ್ಕೆ ಮುನ್ನ ನನ್ನ ತಾಯಿ ಸುಕನ್ಯಾ ರವಿಶಂಕರ್ ಬೆಂಗಳೂರಿನಲ್ಲಿರುವ 'ಇಂಡಿಯನ್ ಮ್ಯೂಸಿಕ್ ಎಕ್ಸ್‌ಪೀರಿಯನ್ಸ್' ಕಲಾ ಗ್ಯಾಲರಿಗೆ ಭೇಟಿ ನೀಡಿ ತಂದೆ ಅವರು ಬಳಸುತ್ತಿದ್ದ ವಾದ್ಯ ಪರಿಕರ, ಬಟ್ಟೆ ಹಾಗೂ ಪ್ರಶಸ್ತಿಗಳನ್ನು ಪ್ರದರ್ಶನಕ್ಕಾಗಿ ದೇಣಿಗೆ ನೀಡಿದ್ದರು. ಇವೆಲ್ಲವನ್ನು ರವಿಶಂಕರ್ ಅವರ ಅಭಿಮಾನಿಗಳು ನೋಡಿ ಸಂತೋಷಪಡುವುದು ಕೂಡ ನಮಗೆ ವಿಶಿಷ್ಟ ಅನುಭವವೇ. ಇದು ಕೂಡ ಜನ್ಮಶತಮಾನೋತ್ಸವ ಸಂದರ್ಭದಲ್ಲೇ ನಡೆದದ್ದು ನಮಗೆ ಸಂತಸ ತಂದಿದೆ.

◆ **ರವಿಶಂಕರ್ ಅವರು ನಿಮ್ಮ ಸಂಗೀತ ಜೀವನವನ್ನು ರೂಪಿಸಿದ ಬಗೆಯನ್ನು ಹೇಗೆ ಸ್ಮರಿಸುತ್ತೀರಿ?**

ನನ್ನ ನಾಲ್ಕನೇ ವಯಸ್ಸಿಗೇ ತಂಬೂರ ಮೀಟಲು ಹೇಳಿಕೊಟ್ಟದ್ದು ತಂದೆ. ಅವರು ಸಿತಾರ್‌ನಲ್ಲಿ ನುಡಿಸುತ್ತಿದ್ದ ಹಿಂದೂಸ್ತಾನಿ ಸಂಗೀತ ಸ್ವಲ್ಪವೂ ಅರ್ಥವಾಗುತ್ತಿರಲಿಲ್ಲ. ಆದರೆ ತಂತಿಯಲ್ಲಿ ಹೊಮ್ಮುತ್ತಿದ್ದ ಮಧುರ ಸಂಗೀತಕ್ಕೆ ಬಹುವಾಗಿ ಮಾರುಹೋಗಿದ್ದೆ. ಮೊದಲ ಬಾರಿಗೆ ಇಂಗ್ಲೆಂಡ್‌ನ ಪ್ರತಿಷ್ಠಿತ ರಾಯಲ್ ಆಲ್ಬರ್ಟ್ ಹಾಲ್‌ನಲ್ಲಿ ತಂದೆಯವರ ಕಛೇರಿಗೆ ತಂಬೂರ ಸಾಥಿ ನೀಡಿದಾಗ ನಿಜವಾಗಿಯೂ ಪುಳಕಿತಳಾಗಿದ್ದೆ. ಆಗ ನನಗೆ ಹದಿನೇಳು ವರ್ಷ. ಅದಾದ ನಂತರ ಅವರಿಂದ ಬಹಳಷ್ಟು ಕಲಿತೆ. ನನ್ನ ಜೀವನಕ್ಕೆ ಒಂದು ಉತ್ತಮ ಹಾದಿ ತೋರಿಸಿದವರು, ಬದುಕಿನಲ್ಲಿ ಸಂಗೀತದ ಬಗ್ಗೆ ಭರವಸೆ ಮೂಡಿಸಿದವರು, ನನ್ನನ್ನು ಒಬ್ಬ ಸಂಗೀತಗಾರ್ತಿಯಾಗಿ ರೂಪಿಸಿದವರು, ಅನೇಕ ಪ್ರತಿಷ್ಠಿತ ವೇದಿಕೆಗಳನ್ನು ಒದಗಿಸಿಕೊಟ್ಟವರು ನನ್ನ ಪ್ರೀತಿಯ ತಂದೆ, ಪಂ. ರವಿಶಂಕರ್‌ಜಿ.

◆ **ಬೆಂಗಳೂರಿನಲ್ಲಿ 2012 ರಲ್ಲಿ ಪಂ. ರವಿಶಂಕರ್ ಅವರ ಸಿತಾರ್ ಕಛೇರಿ ನಡೆದಿದ್ದು, ಅದು ಬೆಂಗಳೂರಿನಲ್ಲಿ ಅವರ ಕೊನೆಯ ಕಛೇರಿಯೂ ಆಗಿತ್ತು. ಇಲ್ಲಿ ತಂದೆಯವರೊಂದಿಗೆ ಸಹವಾದನ ನಡೆಸಿದ ನಿಮಗೆ ಸಂಗೀತ ಬದುಕಿನಲ್ಲಿ ಒಂದು ವಿಭಿನ್ನ ತಿರುವು ದೊರೆಯಿತು. ಆ ಬಗ್ಗೆ ಹೇಳಿ.**

ಅದು ಫೆ. 7, 2012. ಬೆಂಗಳೂರಿನ ಅರಮನೆ ಆವರಣದಲ್ಲಿ 'ಫೇರ್‌ವೆಲ್ ಟು ಬೆಂಗಳೂರು' ಎಂಬ ಕಛೇರಿ ಆಯೋಜನೆಗೊಂಡಿತ್ತು. ಆ ಕಾರ್ಯಕ್ರಮದಲ್ಲಿ ತಂದೆ ಮತ್ತು ನಾನು ಸುಮಾರು ಒಂದು ಗಂಟೆ ಕಾಲ ಕಛೇರಿ ನಡೆಸಿಕೊಟ್ಟೆವು. ತಂದೆಯ ವೃದ್ಧ ಬೆರಳುಗಳು ತಂತಿ ಮೀಟುವಲ್ಲಿ ಸೋಲತೊಡಗಿದಾಗ ಮೀಟುಗಳ ಎಳೆಯನ್ನು ಗಟ್ಟಿಹಿಡಿದು ನುಡಿಸಲು ಪ್ರಯತ್ನಿಸಿದ್ದೆ. ಈ ಕಛೇರಿ ನನ್ನ ಸಂಗೀತ ಬದುಕಿನುದ್ದಕ್ಕೂ 'ಪ್ರೇರಣಾ ಶಕ್ತಿ'. ಅವರಿಗಾಗ 92 ವರ್ಷ. ಸಿತಾರ್ ತಂತಿ ಮೀಟುವಾಗ ಕೆಲವು ಕಡೆ ಕೈಗಳು ನಡುಗುತ್ತಿದ್ದವು. ಆದರೂ ಸಾವರಿಸಿಕೊಂಡು ನುಡಿಸಿ 'ಸಂ'ಗೆ ಬರುವ ಮೊದಲೇ ಕೆಲವೊಮ್ಮೆ ನನ್ನತ್ತ ನೋಡುತ್ತಿದ್ದರು. ನಾನು ತಕ್ಷಣ ಆ ಭಾಗವನ್ನು ಅನುಸರಿಸಿ ನುಡಿಸಿ ರಾಗವನ್ನು ಪೂರ್ಣಗೊಳಿಸುತ್ತಿದ್ದೆ. ಕೆಲವು ಬಾರಿ ಅವರು ಒಂದು ಸಾಲಿನ ಅರ್ಧದಷ್ಟೇ ನುಡಿಸಿ ನನಗೆ ಅವಕಾಶ ಕೊಡುತ್ತಿದ್ದರು. ಅದನ್ನು ಗ್ರಹಿಸಿ ಪರಿಪೂರ್ಣವಾಗಿ ಪ್ರಸ್ತುತಪಡಿಸುವುದು ನನಗೆ ಸವಾಲಾದರೂ ಅತ್ಯಂತ ಖುಷಿ ಕೊಟ್ಟ ಕ್ಷಣಗಳಾಗಿದ್ದವು. ನನ್ನ ಪ್ರತಿಭೆ ಅನಾವರಣವಾಗಲಿ ಎಂಬ ಮಹತ್ತರ ಉದ್ದೇಶ ಇಟ್ಟುಕೊಂಡೇ ಅವರು ಹೀಗೆ ಮಾಡಿದ್ದರು ಎಂಬುದನ್ನು ನನಗೆ ಆಮೇಲೆ ತಿಳಿಸಿದರು. ಅವರ ಔದಾರ್ಯ ಕಂಡು ಬೆರಗಾಗಿದ್ದೆ.

ಅಮೆರಿಕದಲ್ಲಿ 2012ರ ನವೆಂಬರ್ ನಾಲ್ಕರಂದು ಪಂಡಿತ್‌ಜಿ ಅವರ ಕೊನೆಯ ಕಛೇರಿ. ಸಾಕಷ್ಟು ದೈಹಿಕ ಬಳಲಿಕೆ ಇತ್ತು. ಆದರೂ ಆಕ್ಸಿಜನ್ ಸಿಲಿಂಡರ್ ಹಾಕಿಕೊಂಡು ಒಂದು ಗಂಟೆ ಕಾಲ ಕಛೇರಿ ನೀಡಿದ್ದು ನಾದಲೋಕದಲ್ಲಿ ದಾಖಲೆಯ ಭಾಷ್ಯ ಬರೆದಿತ್ತು. ಅವರಿಂದ ಬಹಳಷ್ಟು ಕಲಿತಿದ್ದೆ. ವೇದಿಕೆ ಮೇಲೆ ಅವರ ಶಿಸ್ತುಬದ್ಧತೆ ಹಾಗೂ ಕಟ್ಟುನಿಟ್ಟು ಹೇಗಿತ್ತೆಂದರೆ ಇದನ್ನು ನಾನು ಇನ್ನೂ ಕಲಿಯಬೇಕಾಗಿದೆ. 2012 ಡಿಸೆಂಬರ್ 11ರಂದು ಅವರು ನಮ್ಮನ್ನಗಲಿದರು. ಅವರು ಹಾಕಿಕೊಟ್ಟ 'ಸಂಗೀತ ಮಾರ್ಗ'ವನ್ನು ಸದಾ ಅನುಸರಿಸುತ್ತಲೇ ಮುನ್ನಡೆಯುತ್ತಿದ್ದೇನೆ. ■

